ಆಧುನಿಕ ತಂತ್ರಜ್ಞಾನ ನಮ್ಮ ಕೆಲಸವನ್ನು ಕಡಿಮೆ ಮಾಡಲು ಯತ್ನಿಸುತ್ತಿದೆ. ಈಗ ಕಸ ಗುಡಿಸುವುದಕ್ಕೆ, ಬಟ್ಟೆ ಒಗೆಯುವುದಕ್ಕೆ, ಇಡ್ಲಿ ಹಿಟ್ಟು ರುಬ್ಬುವುದಕ್ಕೆ, ರಸ್ತೆಗೆ ಡಾರು ಹಾಕುವುದಕ್ಕೆ, ಹಾಲು ಕರೆಯುವುದಕ್ಕೆ – ಎಲ್ಲಕ್ಕೂ ಯಂತ್ರಗಳಿವೆ. ಕೀನ್ಸ್ ಹೇಳಿದ ಭವಿಷ್ಯವಾಣಿಯ ಪ್ರಕಾರ ನಮಗೆ ಹೆಚ್ಚು ಹೆಚ್ಚು ವಿರಾಮ ಕಾಲ ಇರಬೇಕಿತ್ತು. ಆದರೆ, ಇರುವ ವಿರಾಮಕಾಲದಲ್ಲಿ ನಾವು ಏನು ಮಾಡುತ್ತಿದ್ದೇವೆ? ನಮ್ಮ ಕೆಲಸವನ್ನು ಇನ್ನೂ ಸುಗಮಗೊಳಿಸುವ ಯಂತ್ರಗಳನ್ನು ಕಟ್ಟುತ್ತಿದ್ದೇವೆ. ಡೆಲಿವರಿಗಾಗಿ ಡ್ರೋನುಗಳು, ಸ್ವಯಂಚಾಲಿತ ಕಾರುಗಳು, ಗ್ರಂಥಾಲಯದಲ್ಲಿ ಬೇಕಾದ ಪುಸ್ತಕವನ್ನು ಆಯ್ದರೆ ಕಪಾಟಿನಿಂದ ಒಯ್ದು ತರುವ ಯಂತ್ರ, ಟ್ರಾಫಿಕ್ ಸಿಗ್ನಲ್ ದಾಟಿದರೆ ಫೋಟೋ ಹಿಡಿದು ನೇರ ಬ್ಯಾಂಕಿನ ಅಕೌಂಟಿಗೆ ಜುಲ್ಮಾನೆಯನ್ನು ಡೆಬಿಟ್ ಮಾಡುವ ತಂತ್ರ... ಹೀಗೆ ಯಂತ್ರ ಮತ್ತು ತಂತ್ರಜ್ಞಾನ ಕೆಲಸವನ್ನು ಇಲ್ಲದಂತಾಗಿಸುತ್ತಿದೆ. ಆದರೆ, ಜನ ದಿನರಾತ್ರಿ ಈ ತಂತ್ರಜ್ಞಾನದ ತಯಾರಿಯಲ್ಲಿ ತೊಡಗಿದ್ದಾರೆ. ಹೀಗೆ ಕೆಲವೇ ಜನ ಈ ರೀತಿಯ ಬೌದ್ಧಿಕ ಕೆಲಸದಲ್ಲಿ ತೊಡಗಿ ದೈಹಿಕ ಶ್ರಮವನ್ನು ಇಲ್ಲವಾಗಿಸುತ್ತಿದ್ದಾರೆ. ದೈಹಿಕ ಶ್ರಮದಿಂದ ಅನೇಕರು ಸಂಪಾದಿಸುತ್ತಿದ್ದ ದುಡ್ಡು ಅದನ್ನು ಮೆದುಳಿನ ಮೂಲಕ ತಂತ್ರಜ್ಞಾನದ ಉಗಮದಲ್ಲಿ ತಮ್ಮ ಸಮಯವನ್ನು ವ್ಯಯ ಮಾಡಿದವರಿಗೆ ಸಲ್ಲುತ್ತದೆ. ಹೀಗಾಗಿ, ಈ ಆಧುನಿಕ ಯುಗದಲ್ಲಿ ಕೆಲವೇ ಜನರ ಕೈಯಲ್ಲಿ ಶ್ರೀಮಂತಿಕೆಯೂ, ತತ್ಫಲವಾಗಿ ಅನೇಕರು ಕೆಲಸ ಕಳೆದುಕೊಂಡಿರುವುದನ್ನು ನಾವು ಕಾಣಬಹುದು. ಆಧುನಿಕತೆಯೇ ಅಸಮಾನತೆಯ ಮೂಲವಿರಬಹುದೇ ಎನ್ನುವುದನ್ನು ಯೋಚಿಸಿನೋಡಲು ಸುಜ್‌ಮನ್ ಪುಸ್ತಕ ನಮ್ಮನ್ನು ಪ್ರೇರೇಪಿಸುತ್ತದೆ.

ಅಸಮಾನತೆಯ ಮೂಲವಿರುವುದು ಬಂಡವಾಳ ಮತ್ತು ಅದರ ಮೇಲೆ ಲಾಭವನ್ನಾರ್ಜಿಸುವ ಅರ್ಥವ್ಯವಸ್ಥೆಯಲ್ಲಿಯೇ? ಅಥವಾ ಬೌದ್ಧಿಕತೆಯನ್ನುಪಯೋಗಿಸಿ ಕೆಲಸವನ್ನು – ತತ್ಫಲವಾಗಿ ಕೆಲಸಗಾರರ ಉಪಯೋಗವನ್ನು ಕಡಿಮೆ ಮಾಡುವ ತಾಂತ್ರಿಕತೆಯಲ್ಲಿದೆಯೇ? ಈ ದ್ವಂದ್ವಕ್ಕೆ ಸರಿಯಾದ ಉತ್ತರವಿಲ್ಲ. ಔದ್ಯೋಗಿಕ ಕ್ರಾಂತಿಯ ಸಮಯಕ್ಕೆ ಇದು ಹೆಚ್ಚು ಸ್ಪಷ್ಟವಾಗಿತ್ತು. ಅಲ್ಲಿ ಯಂತ್ರಗಳನ್ನು ರೂಪಿಸಿದ ತಂತ್ರಜ್ಞರಿಗೆ ಒಂದು ಮಟ್ಟದ ಲಾಭವಾಗುತ್ತಿತ್ತಾದರೂ, ಯಂತ್ರ ತಯಾರಿಸಿ ಮಾರಾಟ ಮಾಡಲು ಬಂಡವಾಳ ಬೇಕಿತ್ತಾದ್ದರಿಂದ ಲಾಭದ ಕೇಂದ್ರವು ಬಂಡವಾಳದತ್ತ ವಾಲಿದ್ದರಲ್ಲಿ ಆಶ್ಚರ್ಯವಿಲ್ಲ.

ಈಗ ಆಗುತ್ತಿರುವುದು ಮಾಹಿತಿ ಕ್ರಾಂತಿ. ಯಾವುದೇ ಉತ್ಕೃಷ್ಟ ಅಥವಾ ಅತ್ಯಾಧುನಿಕ ಯಂತ್ರಗಳಿಲ್ಲದೆಯೇ ಮಾಹಿತಿಯಿಂದ ದಕ್ಷತೆಯನ್ನು ಉಂಟಾಗಿಸಬಹುದು. ಇಲ್ಲಿಯೂ ಮಾನವ ಮಧ್ಯಸ್ಥಿಕೆ ನಗಣ್ಯವಾಗುತ್ತದೆ.

ಒಂದು ಉದಾಹರಣೆ ತೆಗೆದುಕೊಳ್ಳೋಣ. ಹಿಂದೆ ಅಣ್ಣಾವ್ರ ಸಿನಿಮಾ ಬಿಡುಗಡೆಯಾದ ದಿನದಂದೇ ನೋಡಬೇಕೆಂದಿದ್ದರೆ ಎರಡು ಮಾರ್ಗಗಳಿದ್ದವು. ಒಂದು ಆದಷ್ಟು ಬೇಗ ಹೋಗಿ ಸಾಲಿನಲ್ಲಿ ನಿಲ್ಲುವುದು. ನಮ್ಮ ಸಮಯ ಅಮೂಲ್ಯವಾಗಿದ್ದರೆ, ಅಥವಾ ನಿಲ್ಲಲು ಕೈಲಾಗದಿದ್ದರೆ, ಯಾರಿಗಾದರೂ ದುಡ್ಡು ಕೊಟ್ಟು ಸಾಲಿನಲ್ಲಿ ನಿಲ್ಲಿಸಬಹುದು. ಅಂದರೆ ಮೊದಲ ದಿನ ಸಿನಿಮಾ ನೋಡಲು ಹೆಚ್ಚಿನ ಹಣ ಕೊಡಲು ಒಬ್ಬ ಗ್ರಾಹಕ ತಯಾರಿದ್ದರೆ – ಆ ಸವಲತ್ತನ್ನು ಒದಗಿಸಿಕೊಡಲು ಒಬ್ಬ ಮಧ್ಯವರ್ತಿಯಿರುತ್ತಿದ್ದ. ಅದರಿಂದ ಆತನ ಕಾಯಕ ನಡೆಯುತ್ತಿತ್ತು. ಆದರೆ, ಮಾಹಿತಿಯ ಕ್ರಾಂತಿಯಲ್ಲಿ ಎಷ್ಟು ಬೇಡಿಕೆಯಿದೆ, ಎಷ್ಟು ಸೀಟುಗಳಿವೆ ಎನ್ನುವುದನ್ನು ಪಕ್ಕಪಕ್ಕದಲ್ಲಿಟ್ಟು ಅದಕ್ಕೆ ತಕ್ಕ ಬೆಲೆಯನ್ನು ಸಿನಿಮಾ ಮಂದಿರದವರೇ ನಿರ್ಧರಿಸಿ ಹೆಚ್ಚಿನ ಲಾಭವನ್ನಾರ್ಜಿಸುತ್ತಾರೆ. ಈ ಜ್ಞಾನವಿರುವವರು ಅನೇಕ ಹಂಚಿಹೋದ ಮಧ್ಯವರ್ತಿಗಳ ದಂಧೆಯನ್ನು ಇಲ್ಲವಾಗಿಸಿ, ಆ ಎಲ್ಲ ಲಾಭವೂ ಮಾಹಿತಿಯಿದ್ದವರ ಬಳಿಗೆ ಬರುವಂತೆ ರೂಪಿಸುತ್ತಾರೆ. ಹೀಗಾಗಿ, ಆ ಒಂದು ವ್ಯಕ್ತಿಯ ಶ್ರೀಮಂತಿಕೆ ಮತ್ತು ಕೆಲಸ ಎರಡೂ ಹೆಚ್ಚಾಗುತ್ತವೆ. ತಮ್ಮ ಪ್ರತಿಭೆಯನುಸಾರ ಕೆಲಸ ಮಾಡಲು ತಯಾರಿರುವ ಮಧ್ಯವರ್ತಿಗಳಿಗೆ ಕೆಲಸ ಇಲ್ಲವಾಗುತ್ತದೆ. ಅವರಿಗೆ ತಿಂಗಳ ಭತ್ತೆ ಕೊಟ್ಟಾಗ ಅದನ್ನು ಮರುವಿತರಣೆ ಎಂದು ಪರಿಗಣಿಸದೇ ಸೋಮಾರಿತನದ ಪ್ರೋತ್ಸಾಹ ಧನ ಎಂದು ಪರಿಭಾಷಿಸುತ್ತೇವೆ.

ಈ ಎಲ್ಲದರ ಹಿಂದಿರುವುದು ಕೆಲಸ ಮತ್ತು ಕೆಲಸದ ಗತಿ. ವಿರಾಮ ಮತ್ತು ವಿರಾಮದ ಅವಶ್ಯಕತೆ. ಸುಜ್‌ಮನ್ ಈ ಭಾವವನ್ನು ತಮ್ಮ ಪುಸ್ತಕದಲ್ಲಿ ಅದ್ಭುತವಾಗಿ ಹೊರತರುತ್ತಾರೆ. ●